

ಕಲೆ: ಡಿ.ಕೆ. ರಮೇಶ್

# ತಿರುವು

ಫ್ರಾಕಿನಿಂದ ಮಿಡಿಗೆ
ಚೂಡಿದಾರದಿಂದ ಸೀರೆಗೆ
ಬಡ್ತಿ ಹೊಂದಲಿಕ್ಕೆ ಯಾವ
ದೊಣ್ಣೆನಾಯಕನ ಅಪ್ಪಣೆಯೂ
ಬೇಕಿರಲಿಲ್ಲವಲ್ಲ ನಮಗೆ?

ನೀಟಾಗಿ ನಿರಿಗೆ ಹಿಡಿದು
ಸೆರಗಿನ ಮೇಲಕ್ಕೊಂದು
ಸೊಂಟದ ನಡುವಿಗೊಂದು
ಆಚೆಗೂ, ಈಚೆಗೂ ಸೇಫಾಗಿರಲೆಂದು
ಸಿಕ್ಕಿಸಿದ್ದೇ ಸಿಕ್ಕಿಸಿದ್ದು ಸೇಫ್ಟಿ ಪಿನ್ನು.

ಅಚಾನಕ್ ಆಗಿ ಒಮ್ಮೊಮ್ಮೆ
ಬೀಸುವ ಗಾಳಿಗೆ ಆರೆಗಳಿಗೆ
ಸೆರಗು ತುಸು ಕಂಪಿಸಿದರೆ?
ಸಿಕ್ಕಿಸಿದಷ್ಟೂ ಕೈ ಮತ್ತಷ್ಟು ಪಿನ್ನುಗಳಿಗೆ
ತಡಕಾಡುವಾಗಲೇ ಎಲ್ಲಾ ಶುರುಗೊಂಡದ್ದು.

ಉದಾಹರಣೆಗಳೇ ಇಲ್ಲ ಇತಿಹಾಸದುದ್ದಕ್ಕೂ
ಕಾಲದ ವ್ರತ ಭಂಗ ಆದುದಕ್ಕೆ
ಹಾಗಂತ ತಕರಾರುಗಳೇನೂ ಇಲ್ಲ ಆದರದ್ದು
ನಾವು ಹಿಂದಿರುಗಿ ನೋಡುವುದಕ್ಕೆ.

ಈಗೀಗ ನಡು ಹಾದಿಗೆ ಕಾಲಿಟ್ಟ ಹೊತ್ತು
ಉಂಗುಷ್ಟಕ್ಕೆ ಹಾಳು ನಿರಿಗೆ ಸಿಕ್ಕು
ತೊಡರಿಕೊಂಡದ್ದಕ್ಕೆ ಶಪಿಸುತ್ತ
ಒಪ್ಪವಾಗಿ ಕುರ್ತಾ ಧರಿಸಿ ಹೊಸ ಹವೆಗೆ
ಒಡ್ಡಿಕೊಂಡಾಗಿನಿಂದ...

ಕಾಲ ತುಸು ಬಿಗು ಸಡಿಲಿಸಿದೆ
ಅನ್ನುತ್ತಿದ್ದಾರೆ ಹಾದಿ ಕೊನೆಯಲ್ಲಿ
ನಿಂತವರು.

ಮಗಳು ಎದೆಯೆತ್ತರಕ್ಕೆ ಬೆಳೆದು
ಅಪ್ಪನ ಕಿಸೆಯಿಂದಲೇ ನೋಟು ಎಣಿಸಿ